ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 94
ಸದಸ್ಯರ ಹೆಸರು : ಶ್ರೀ ಎನ್.ಎಸ್. ಬೋಸ್‌ರಾಜು
ಉತ್ತರಿಸುವ ಸಚಿವರು : ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09–07–2018

	ಪ್ರಶ್ನೆ	ಉತ್ತರ
ಅ)	ಮಾನ್ವಿ ನಗರದಲ್ಲಿರುವ NEKSRTC ಬಸ್ಸು ಡಿಪೋ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು;	ಮಾನ್ವಿ ಪಟ್ಟಣದಲ್ಲಿ ಬಸ್ ಘಟಕ ನಿರ್ಮಿಸುವುದಕ್ಕೆ ತೋಟಗಾರಿಕೆ ಇಲಾಖೆಯಿಂದ ಸರ್ವೇ ನಂ. 421ರಲ್ಲಿ 5 ಎಕರೆ ನಿವೇಶನವನ್ನು ಸಂಸ್ಥೆಗೆ ಹಸ್ತಾಂತರ ಮಾಡಿಕೊಳ್ಳಲಾಗಿದೆ. ಸದರಿ ಬಸ್ ಘಟಕದ ನಿವೇಶನವು ಮುಖ್ಯ ರಸ್ತೆಯಿಂದ ಸುಮಾರು 150ಮೀ ಒಳಭಾಗದಲ್ಲಿದ್ದು, ಕೂಡು ರಸ್ತೆ ಸಂಪರ್ಕ ಇರುವುದಿಲ್ಲ. ಘಟಕದ ನಿವೇಶನ ಮತ್ತು ಮುಖ್ಯ ರಸ್ತೆಯ ಮಧ್ಯಭಾಗದಲ್ಲಿ ಖಾಸಗಿ ಬಡಾವಣೆ ಇರುತ್ತದೆ. ಸದರಿ ಖಾಸಗಿ ಬಡಾವಣೆಯ 40*40 ಅಡಿ ನಿವೇಶನ ಅಡ್ಡವಿದ್ದು ಉಳಿದಂತೆ ರಸ್ತೆ ಇದೆ. ಸದರಿ ಅಡ್ಡವಿರುವ ಖಾಸಗಿ ಲೇಔಟ್‌ನಲ್ಲಿಯ ನಿವೇಶನವನ್ನು ಸಂಸ್ಥೆಗೆ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ.
ಆ)	ನೂತನ ಸಿರವಾರ ತಾಲ್ಲೂಕಿನಲ್ಲಿ ನೂತನ ಬಸ್ಸು ನಿಲ್ದಾಣ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?	ಸಿರವಾರದಲ್ಲಿ 1990ರಲ್ಲಿ ಸರ್ವೆ ನಂ 419ರಲ್ಲಿಯ 1 ಎಕರೆ ನಿವೇಶನದಲ್ಲಿ ಸಂಸ್ಥೆಯ ಬಸ್ ನಿಲ್ದಾಣ ನಿರ್ಮಿಸಿದ್ದು, ಕಾರ್ಯಾಚರಣೆಯಲ್ಲಿದೆ. ಬಸ್ ನಿಲ್ದಾಣದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಯೋಜನೆ ಇದೆ.

ಸಂ: ಸಾರಿಇ 77 ಸಾಸಂಪ್ರ 2018

(ಡಿ.ಸಿ. ತಮ್ಮಣ್ಣ)
ಸಾರಿಗೆ ಸಚಿವರು